ದಿನಾಂಕ : DATE 8/4/21
ವಿಷಯ / Subject : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

# ಪರಿಸ್ಥಿತಿ ನೋಡಿಕೊಂಡು ಎಸ್ಮಾ ಜಾರಿ: ಸಿಎಂ

## ಸಾರಿಗೆ ನೌಕರರು ಹಟ ಮಾಡಿ ಮುಷ್ಕರ ನಡೆಸೋದು ಸರಿಯಲ್ಲ | ಮುಷ್ಕರ ಕೈಬಿಡಬೇಕು, ಸರ್ಕಾರ ಮಾತುಕತೆಗೆ ಸದಾ ಸಿದ್ಧವಿದೆ

## ಸ್ವಾರ್ಥಕ್ಕಾಗಿ ಮುಷ್ಕರ ನಡೆಸುತ್ತಿದ್ದಾರೆ | ಯಾರೂ ಸುಲಿಗೆ ಮಾಡ್ಬಾರ್ದು | ಖಾಸಗಿ ವಾಹನದವರಿಗೂ ಮನವಿ ಮಾಡ್ತೇವೆ: ಬಿಎಸ್‌ವೈ

• **ಕನ್ನಡಪ್ರಭ ವಾರ್ತೆ** ಬೆಳಗಾವಿ 8/4/21

ಸಾರಿಗೆ ನೌಕರರು ಹಟ ಮಾಡಿ ಮುಷ್ಕರ ಮಾಡುವುದು ಸರಿಯಲ್ಲ, ಮುಷ್ಕರ ಕೈಬಿಟ್ಟು ಸೇವೆಗೆ ಮರಳಬೇಕು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತೊಮ್ಮೆ ಮನವಿ ಮಾಡಿದ್ದಾರೆ. ಜತೆಗೆ,



ಮುಷ್ಕರ ಹಿನ್ನೆಲೆಯಲ್ಲಿ ಎಸ್ಮಾ ಜಾರಿ ಕುರಿತು ಚರ್ಚಿಸಲಾಗುತ್ತಿದೆ. ಪರಿಸ್ಥಿತಿ ನೋಡಿಕೊಂಡು ತೀರ್ಮಾನಕ್ಕೆ ಗೊಳ್ಳಲಾಗುವುದು ಎಂದೂ ಎಚ್ಚರಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರಿಗೆ ನೌಕರರ ಮುಷ್ಕರದಿಂದಾಗಿ ಪ್ರಯಾಣಿಕರಿಗೆ ತೊಂದರೆಯಾಗದಂತೆ ಈಗಾಗಲೇ ಜಿಲ್ಲಾ ಕೇಂದ್ರದಿಂದ ಖಾಸಗಿ ವ್ಯವಸ್ಥೆ, ಬೇರೆ ಬೇರೆ ವ್ಯವಸ್ಥೆ ಮಾಡಲಾಗಿದೆ. ಖಾಸಗಿ ವಾಹನದವರಿಗೂ ಮನವಿ ಮಾಡುತ್ತೇವೆ. ಯಾರೂ ಪ್ರಯಾಣಿಕರನ್ನು ಸುಲಿಗೆ ಮಾಡಬಾರದು. ಪ್ರಯಾಣಿಕರನ್ನು ಸುಲಿಗೆ ಮಾಡಿದರೆ ಅಂಥವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಅಲ್ಲದೇ ಇದೇ ವೇಳೆ, ಕರ್ತವ್ಯಕ್ಕೆ ಹಾಜರಾಗುವ ನೌಕರರಿಗೆ ಸೂಕ್ತ ಪೊಲೀಸ್ ಭದ್ರತೆಯನ್ನು ಒದಗಿಸಲಾಗುವುದು ಎಂದು ಹೇಳಿದ್ದಾರೆ.

# ಕೆಲಸಕ್ಕೆ ಬರದಿದ್ದರೆ ಸಂಬಳ ಕಟ್: ಡಿಸಿಎಂ ಲಕ್ಷ್ಮಣ ಸವದಿ

## ಕರ್ತವ್ಯಕ್ಕೆ ಹಾಜರಾಗಲು ಮನವಿ | ಪ್ರೇರಿತ ಮುಷ್ಕರ ಹಿಂದಿರುವವರು ಯಾರೆಂದು ಶೀಘ್ರ ಬಯಲು

**ಬೀದರ್:** ಸಾರಿಗೆ ಸಂಸ್ಥೆ ನೌಕರರು ಪ್ರತಿಭಟನೆ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗುವಂತೆ ಮನವಿ ಮಾಡಿರುವ ಉಪಮುಖ್ಯಮಂತ್ರಿ, ಸಾರಿಗೆ ಸಚಿವ ಲಕ್ಷ್ಮಣ ಸವದಿ, ಯಾರು ಕೆಲಸಕ್ಕೆ ಬರುವುದಿಲ್ಲವೋ ಅವರಿಗೆ ಸಂಬಳ ನೀಡಲು ಅಸಾಧ್ಯ ಎಂದು ಖಡಕ್ ಆಗಿ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ ಸಾರ್ವಜನಿಕರಿಗೆ ತೊಂದರೆಯಾಗದಿರಲಿ ಎಂಬ ಕಾರಣಕ್ಕೆ ಈಗಾಗಲೇ ಖಾಸಗಿ ವಾಹನಗಳಿಗೆ ಅನುವು ಮಾಡಿಕೊಡಲಾಗಿದ್ದು, ಇನ್ನೆರಡು ದಿನಗಳಲ್ಲಿ ಈ ಸಂಖ್ಯೆಯನ್ನು 4 ಸಾವಿರಕ್ಕೇರಿಸುವುದಾಗಿ ತಿಳಿಸಿದ್ದಾರೆ.

ಹುಮನಾಬಾದ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ತವ್ಯಕ್ಕೆ ಬರಲಿಲ್ಲ ಅಂದ್ರೆ ನಾಲ್ಕೂ ನಿಗಮಗಳ ಆರ್ಥಿಕತೆ ಕುಸಿಯುತ್ತೆ. ಆದಾಯ ಸಂಪೂರ್ಣ ನಿಂತು ಹೋಗಿದೆ. ಈ ತಿಂಗಳ ಸಂಬಳ ಕೊಡಲೂ ಕಷ್ಟ ಆಗುತ್ತದೆ. ಯಾರದ್ದೋ ಮಾತು ಕೇಳಿ ಹಠಮಾರಿತನದಿಂದ ಪ್ರತಿಭಟನೆ ನಡೆಸದಿರಿ ಎಂದು ಸಲಹೆ ನೀಡಿದರು.

ಸಂಬಳ ಹೆಚ್ಚಿಗೆ ಕೊಡಲು ನಾವು ಸಿದ್ಧರಿದ್ದೇವೆಂದು ಹೇಳಿದ ಬಳಿಕ ನೌಕರರು ಪ್ರತಿಭಟನೆ ಕೈಬಿಡುವ ಆಶಾಭಾವವಿತ್ತು. ಆದರೆ ಸಾರಿಗೆ ಮುಷ್ಕರದ ಹಿಂದೆ ಕೆಲವೊಂದು ಜನ



ಮುಷ್ಕರ ಮಾಡಿಸಲೇಬೇಕೆಂಬ ಉದ್ದೇಶ ಹೊಂದಿದ್ದು, ಅವರು ಯಾರು ಎಂದು ನಾನು ಈಗಲೇ ಹೇಳುವುದಿಲ್ಲ. ಸ್ವಲ್ಪ ದಿನದಲ್ಲಿ ನೀವೇ ಅದನ್ನ ಹೇಳುತ್ತೀರಿ. ಮಾಧ್ಯಮದವರೇ ಜನರ ಮುಂದೆ ಬಟಾಬಯಲು ಮಾಡುತ್ತಾರೆ ಎಂದರು.

**ಖಾಸಗಿ ಬಸ್ ಸೇವೆ:** ಸಾರ್ವಜನಿಕರಿಗೆ ತೊಂದರೆ ಆಗಬಾರದೆಂಬ ಕಾರಣಕ್ಕೆ ಈಗಾಗಲೇ ಸಾಕಷ್ಟು ಖಾಸಗಿ ಬಸ್‌ಗಳ ಓಡಾಟಕ್ಕೆ ಅನುವು ಮಾಡಿಕೊಡಲಾಗಿದೆ. ನಾಳೆಯಿಂದ 4 ಸಾವಿರ ಖಾಸಗಿ ವಾಹನಗಳ ಓಡಾಟಕ್ಕೆ ಅನುವು ಮಾಡಿಕೊಡುತ್ತೇವೆ. ಪರ್ಮಿಟ್ ಇಲ್ಲದಿದ್ದರೂ ವಿಮೆ ಇದ್ದರೆ ಸಾಕು ಖಾಸಗಿ ವಾಹನಗಳ ಸಂಚಾರಕ್ಕೆ ಅವಕಾಶ ನೀಡುತ್ತಿದ್ದೇವೆ. ರಾಜ್ಯದ ವಿವಿಧಕಡೆಗಳಲ್ಲಿ ಹೆಚ್ಚುವರಿ ರೈಲು ಓಡಿಸುವುದು, ಮೆಟ್ರೋ ರೈಲು ಮತ್ತು ಏರ್‌ಪೋರ್ಟ್‌ಗೆ ವೋಲ್ವೋ ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸಲು ಮನವಿ ಮಾಡಿದ್ದೇವೆ. ಖಾಸಗಿ ಬಸ್‌ಗಳು ದುಬಾರಿ ಹಣ ತೆಗೆದುಕೊಳ್ಳದಂತೆ ವಿನಂತಿ ಮಾಡಿಕೊಳ್ಳುತ್ತೇನೆ ಎಂದು ತಿಳಿಸಿದರು.

77